ತಾರೀಖು 28ನೇ ಮೇ 1885.

ಮೈಸೂರು ಡಿಸ್ಟ್ರಿಕ್ಟಿನಲ್ಲಿ 1885ನೇ ಇಸವಿ ಜುಲೈ 1ನೇ ಮಕ್ತುಂ ಲಾಗಾಯತು 1886ನೇ ಇಸವಿ ಮಾರ್ಚಿ 31ನೇ ಮಕ್ತುಂ ವರಿಗೆ ಇದರಡಿ ಕಂಡ ತವೂಂ ಘಾರೆಸ್ಟುಗಳಿಂದಲಾಗಲಿ ಯಾವದಾದರೊಂದು ಘಾರೆಸ್ಟಿನಿಂದಾಗಲಿ ಅವಗಳ ಬಾಜೂದಲ್ಲಿ ಕಾಣಿರುವ ಡಿಪೋ ಗಳಿಗೆ ನಾಟೂ ಮತ್ತು ಚೌಬೀನೇಗಳನ್ನು ಭಂಡೀ ಮೂಲಕ ಸಾಗಿಸುವ ಬಗ್ಯೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ:—

ಭಾರಿ ನಾಟೂ.

ಭಂಡಿಪುರ ಘಾರೆಸ್ಟಿನಿಂದ ಮೈಸೂರು ಉಡ್ಡೂರಡಿಗೆ.
ಬಾರಂಬಾಡಿ ಘಾರೆಸ್ಟಿನಿಂದ ಡಿಟೋ

ಸಣ ನಾಟೂ ಮತ್ತು ಚೌಬೀನೆಗಳು.

ಭಂಡಿಪುರ ಸ್ಟೇಟ್ ಘಾರೆಸ್ಟಿನಿಂದ	..	ಪಂಗಲದ ಡಿಪೋಗೆ ಗುಂಡಲ್‌ಪೇಟೆ ಡಿಟೋ
ಬಾರಂಬಾಡಿ ಡಿಟೋ	.	ಮದ್ದೂರು ಡಿಪೋಗೆ ಗುಂಡಲ್‌ಪೇಟೆ ಡಿಟೋ
ಮತ್ತಿಕುಪ್ಪೆ ಡಿಟೋ	..	ಅಂತರಸಂತೆ ಡಿಟೋ

ಯಲ್ಲ ದರಖಾಸ್ತುಗಳೂ "ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟೂ ವಗೈರೆಗಳನ್ನು ಘಾರೆಸ್ಟುಗಳಿಂದ ಡಿಪೋಗಳಿಗೆ ಭಂಡೀ ಮೂಲಕ ಸಾಗಿ ಸುವ ಬ್ಯೆ ದರಖಾಸ್ತು" ಯೆಂಬ ಮಾತುಗಳು ಮೇಲ್ ವಿಳಾಸ ಬರೆಯಲ್ಪಡತಕ್ಕದ್ದು.

ಮೇಲ್ಕಂಡ ದರಖಾಸ್ತುಗಳು, ಮೈಸೂರು ಡಿಸ್ಟ್ರಿಕ್ಟ್ ಘಾರೆಸ್ಟು ವ ಗವರ್ಣಮೆಂಟ್ ಘಾರಂಗಳ ಸೂಪರ್‌ಟೆಂಡೆಂಟರವರಿಂದ 1885ನೇ ಇಸವಿ ಜೂ೯ 20ನೇ ಮಕ್ತುಂ ವರಿಗೆ ತೆಗದುಕೊಳ್ಳಲ್ಪಡುವವು ಮತ್ತು ಸದರಿ ತಾರೀಖಿನಲ್ಲಿ ಅವು ಫೈಸಲ್ಮಾಡಲ್ಪಡುವವು.

ವುದ್ದೇಸುವ ಕಂಟ್ರಾಕ್ಟುದಾರರು ಮೇಲ್ಕಂಡ ಘಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ಕಾಣಿರುವ ಡಿಪೋಗಳಿಗೆ ನಾಟೂ ಮತ್ತು ಚೌಬೀನೆಗಳನ್ನು ಯಾವ ಕಮ್ಮಿದರಗಳಿಗೆ ಭಂಡೀ ಮೂಲಕ ಸಾಗಿಸುತ್ತಾರೋ ಅಂಥಾ ಕಮ್ಮೀ ದರಗಳನ್ನು ನಮೂದಿಸತಕ್ಕದ್ದು.

ಹಾಲಿ ಜಾರಿಯಲ್ಲಿರುವ ಜಾಸ್ತಿ ದರಗಳ ಪ್ರಕಾರವೇ ಸಾಗಿಸಲ್ಪಡುವ ಬಗ್ಯಾಗಿ ಬರುವ ಯಲ್ಲಾ ದರಖಾಸ್ತುಗಳೂ ತಿರಸ್ಕರಿಸಲ್ಪಡುವ ವು. ಯಾವ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅಂಥಾ ಕಂಟ್ರಾಕ್ಟುದಾರನು ಜುಲೈ ಗುರೆ) ತಾರೀಖು ವಳಗಾಗಿ 300 ರೂಪಾಯಿಗ ಳನ್ನು ಜಾವಿರ್ಸ ತರೀಕ ಖಜಾನೆಯಲ್ಲಿ ಡಿಪಾಜಿಟ್ ಇಡತಕ್ಕದ್ದು.

ಹಾಲಿ ಜಾರೀಲಿ ಇರುವ ದರಗಳ್ಯಾವವೆಂದರೆ:—

	ರೂ.	ಆ.	ಪೈ.
ಘನ ಅಡಿ 50ಕ್ಕೆ ಮೇಲ್ಪಟ್ಟ ನಾಟೂಕ್ಕೆ—ಭಂಡಿಪುರ ಮತ್ತು ಬಾರೆಂಬಾಡಿ ಘಾರೆಸ್ಟುಗಳಿಂದ ಮೈಸೂರು ವುಡ್ ಯಾರಡಿಗೆ ಘನ ಅಡಿ 1ಕ್ಕೆ	0	8	0
ಘನ ಅಡಿ 50ಕ್ಕೆ ಕೀಳ್ಪಟ್ಟ ನಾಟೂಕ್ಕೆ—ಭಂಡಿಪುರ ಮತ್ತು ಬಾರೆಂಬಾಡಿ ಘಾರೆಸ್ಟುಗಳಿಂದ ಮೈಸೂರಿಗೆ ಡಿಟೋ	0	6	0
ಸಣ ನಾಟೂಗಳು ಮತ್ತು ಚೌಬೀನೆಗಳು—ಭಂಡಿಪುರದಿಂದ ಪಂಗಲಕ್ಕೆ ಮತ್ತು ಬಾರೆಂಬಾಡಿಯಿಂದ ಮದ್ದೂರು ಡಿಪೋಗಳಿಗೆ ಭಂಡಿ ಜೋಡೆ 1ಕ್ಕೆ	1	8	0
ಸಣ ನಾಟೂಗಳು ಮತ್ತು ಚೌಬೀನೆಗಳು—ಬಂಡಿಪುರ ಮತ್ತು ಬಾರೆಂಬಾಡಿ ಘಾರೆಸ್ಟುಗಳಿಂದ ಗುಂಡಲ್‌ಪೇಟೆಗೆ ಭಂಡಿ ಜೋಡೆ 1ಕ್ಕೆ	2	8	0
ಸಣ ನಾಟೂಗಳು ಮತ್ತು ಚೌಬೀನೆಗಳು—ಮತ್ತಿಕುಪ್ಪೆ ಘಾರೆಸ್ಟಿನಿಂದ ಅಂತರಸಂತೆ ಡಿಪೋಗೆ ಭಂಡಿ ಜೋಡೆ 1ಕ್ಕೆ	1	13	0

ಈ ವಿಷಯದಲ್ಲಿ ಇನ್ನೂ ಜಾಸ್ತಿ ತಪಶೀಲ್‌ಗಳು ಇದರಡಿ ರುಜೂ ಮಾಡಿರುವವರ ಆಫೀಸಿನಲ್ಲಿ ಖುದ್ದಾಗಿ ಹೋಗಿ ತಿಳಿದುಕೊಳ್ಳಬಹುದು.

ತಾರೀಖು 4ನೇ ಜೂ೯ 1885.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟೂ ವ ಚೌಬೀನೆಗಳನ್ನು, 1885ನೇ ಇಸವಿ ಜುಲೈ 1ನೇ ಮಕ್ತುಂ ಲಾಗಾಯಿತು 1886ನೇ ಇಸವಿ ಮಾರ್ಚಿ 31ನೇ ಮಕ್ತುಂ ವರಿಗೆ ಇದರಡಿ ಕಂಡ ತವೂಂ ಡಿಸ್ಟ್ರಿಕ್ಟು ಘಾರೆಸ್ಟುಗಳಿಂದಲಾಗಲಿ ಯಾವದಾದರೊಂದು ಡಿಸ್ಟ್ರಿಕ್ಟು ಘಾರೆಸ್ಟಿನಿಂ ದಾಗಲಿ ಅವುಗಳ ಬಾಜೂದಲ್ಲಿ ಕಾಣಿರುವ ಡಿಪೋಗಳಿಗೆ ಭಂಡೀ ಮೂಲಕ ಸಾಗಿಸುವ ಬ್ಯೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟವೆ.

ತಾಲ್ಲೂಕು.	ಫಾರೆಸ್ಟು.			ಡಿಪೋಗಳು.
ಹುಣಸೂರು.	ವೀರನಹೊಸಹಳ್ಳಿ	..	..	ಹುಣಸೂರು.
	ಕಾಚಹುನಹಳ್ಳಿ	..	..	ಡಿಟೋ
	ಆನೆಚೌಕೂರು	..	..	ಪರಿಯಾಪಟ್ಣ
	ಮಾವಕಲ್ಲು	..	..	ಡಿಟೋ
	ದೊಡ್ಡಹರಿವೆ	..	..	ದೊಡ್ಡನೇರಲೆ
	ಚನ್ನಕಲ್ಲು	..	..	ಡಿಟೋ
ಹೆಗ್ಗಡದೇವನಕೋಟೆ	ಕಾಕನಕೋಟೆ	..	..	ಅಂತರಸಂತೆ
	ಮೇಟಿಕುಪ್ಪೆ	..	..	ಡಿಟೋ
	ಬೇಗೂರು	..	..	ಮಳಲಿ
ನಂಜನಗೂಡು	ಆಯನೂರು ಮಾರಿಗುಣಿ	..	..	ಹುರಾ
ಚಾಮರಾಜನಗರ	ಪುಂಜೂರು	..	..	ಚಾಮರಾಜನಗರ
	ಬೆಲವಟ್ಟ	..	..	ಡಿಟೋ
	ಜೋತಿಗವ್ವಡನಪುರ	..	..	ಡಿಟೋ

ತಮೂಂ ದರಖಾಸ್ತುಗಳೂ "ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟಾ ವಗೈರೆಗಳನ್ನು ಡಿಸ್ಟ್ರಿಕ್ಟು ಫಾರೆಸ್ಟುಗಳಿಂದ ಡಿಪೋಗಳಿಗೆ ಭಂಡೀ ಮೂಲಕ ಸಾಗಿಸುವ ಬಗ್ಯೆ ದರಖಾಸ್ತು" ಯೆಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

ಸದರೀ ಮೇಲ್ಕಂಡ ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ವ ಗವರ್ಮೆಂಟ್ ಫಾರಂಗಳ ಸೂಪರ್‌ಟೆಂಡೆಂಟರವರಿಂದ 1885ನೇ ಇಸವಿ ಜೂ೯ 20ನೇ ಮುಕ್ಕಂವರಿಗೆ ತೆಗದುಕೊಳ್ಳಲ್ಪಡುವವು. ಮತ್ತು ಅವು ಸದರೀ ತಾರೀಖಿನಲ್ಲಿ ಅವರ ಆಫೀಸಿನೊಳಗೆ ವಿಲೇವಾರಿ ಬಗ್ಯೆ ಖುಲ್ಲಾ ಮಾಡಲ್ಪಡುವವು.

ಉದ್ದೇಶಿಸುವ ಪ್ರತಿ ಕಂಟ್ರಾಕ್ಟುದಾರನೂ, ನಾಟಾ ಮತ್ತು ಚಾಪೀನೆಗಳನ್ನು ಮೇಲ್ಕಂಡ ಫಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ಕಾಣಿಸಿರುವ ಡಿಪೋಗಳಿಗೆ ಭಂಡೀ ಮೂಲಕ ಸಾಗಿಸುವ ಬಗ್ಯೆ ತಾನು ವೊಪ್ಪಿಕೊಳ್ಳುವ ಕಮ್ಮೀದರವನ್ನು ನಮೂದಿಸತಕ್ಕದ್ದು.

ಹಾಲಿ ಜಾರಿಯಲ್ಲಿರುವ ಜಾಸ್ತಿ ದರಗಳ ಪ್ರಕಾರವೇ ಸಾಗಿಸಲ್ಪಡುವ ಬಗ್ಯಾಗಿ ಬರುವ ತಮೂಂ ದರಖಾಸ್ತುಗಳೂ ತೀರ್ಮಾನಿಸಲ್ಪಡುವವು.

ಹಾಲಿ ಜಾರೀಯಿರತಕ್ಕ ದರಗಳ್ಯಾವವೆಂದರೆ:—

				ದರಭಂಡಿ ಫೋಜೆ 1ಕ್ಕೆ ರೂ.	ಆ.	ಪೈ.
ನಾಟಾ ವ ಚಾಪೀನೆಗಳು,—ವೀರನಹೊಸಹಳ್ಳಿ ಮತ್ತು ಕಾಚಹುನಹಳ್ಳಿ ಜಂಗಲಿಗಳಿಂದ ಹುಣಸೂರಲ್ಲಿ ರತಕ್ಕ ಡಿಪೋಗೆ		..	..	2	8	0
ಡಿಟೋ	ಡಿಟೋ ಆನೆಚೌಕೂರಿಂದ ಪರಿಯಾಪಟ್ಣಕ್ಕೆ	..	..	1	8	0
ಡಿಟೋ	ಡಿಟೋ ಮಾವಕಲ್ಲಿನಿಂದ ಪೆರಿಯಾಪಟ್ಣಕ್ಕೆ	..	..	2	4	0
ಡಿಟೋ	ಡಿಟೋ ದೊಡ್ಡಹರಿವೆಯಿಂದ ದೊಡ್ಡ ನೇರಲೆಗೆ	..	..	3	0	0
ಡಿಟೋ	ಡಿಟೋ ಚನ್ನಕಲ್ಲಿನಿಂದ ದೊಡ್ಡನೇರಲೆಗೆ	..	..	2	0	0
ಡಿಟೋ	ಡಿಟೋ ಕಾಕನಕೋಟೆಯಿಂದ ಅಂತರಸಂತೆಗೆ	..	..	1	10	0
ಡಿಟೋ	ಡಿಟೋ ಮೇಟಿಕುಪ್ಪೆ ಯಿಂದ ಅಂತರ ಸಂತೆಗೆ	..	..	1	12	0
ಡಿಟೋ	ಡಿಟೋ ಬೇಗೂರಿಂದ ಮಳಲಿಗೆ	..	..	1	14	0
ಡಿಟೋ	ಡಿಟೋ ಆಯನೂರಮಾರಿಗುಡಿಯಿಂದ ಹುರಾಕ್ಕೆ	..	..	3	8	0
ಡಿಟೋ	ಡಿಟೋ ಪುಂಜೂರಿಂದ ಚಾಮರಾಜನಗರಕ್ಕೆ	..	..	0	1	6
ಡಿಟೋ	ಡಿಟೋ ಬೆಲವಟ್ಟದಿಂದ ಚಾಮರಾಜನಗರಕ್ಕೆ	..	..	ಭಂಡಿ 1ಕ್ಕೆ ಮೈಲಿ 1ಕ್ಕೆ		
ಡಿಟೋ	ಡಿಟೋ ಜೋತಿಗೌಡನ ಪುರದಿಂದ ಚಾಮರಾಜ ನಗರಕ್ಕೆ.	..	..			

ಉದ್ದೇಶಿಸುವ ಕಂಟ್ರಾಕ್ಟುದಾರರು, ಅವಶ್ಯಕವಾದ ಹೆಚ್ಚಿಗೆ ತಪಸೀಲ್‌ಗಳನ್ನು ಫಾರೆಸ್ಟು ಸೂಪರ್‌ಟೆಂಡೆಂಟರವರನ್ನು ಮೈಸೂರ ವೊಕ್ಕಾಂ ಅವರ ಆಫೀಸಿನಲ್ಲಿ ಖುದ್ದಾಗಿ ಕೇಳಿ ತಿಳಿದುಕೊಳ್ಳಬಹುದು.

ಸಿ. ಇ. ಯಂ. ರಸ್ಸೆಲ್, ಯಂ. ಆರ್. ಎ. ಸಿ.,
ಫಾರೆಸ್ಟು ಮತ್ತು ಫಾರಂಗಳ ಸೂಪರ್‌ಟೆಂಡೆಂಟ್.